# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 144 | Pages. 2 | Date: 13-05-2026, WEDNSDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 144 - ಪುಟಗಳು : 2 13-05-2026 ಬುಧವಾರ | Ph: 8762954248 | ದರ : ₹1


# ಜೂನ್ ಬಳಿಕ ಪ್ರಧಾನಿಯಿಂದ ಮೆಗಾ ಡೇರಿ ಉದ್ಘಾಟನೆ

## ರಾಜ್ಯ ಸರ್ಕಾರದ ದಾಕ್ಷಿಣ್ಯ ಇಲ್ಲ | ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹಿಂದುಸ್ತಾನದ ಎಲ್ಲಿಯೂ ಇಲ್ಲದ ಮೆಗಾ ಡೇರಿ ಹಾಸನದಲ್ಲಿ ನಿರ್ಮಾಣವಾಗಿದ್ದು ಜೂನ್ ಬಳಿಕ ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದಾರೆ. ಅಷ್ಟರೊಳಗೆ ಬಾಕಿ ಕೆಲಸ ಮುಗಿಸಬೇಕು ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಹೇಳಿದರು.

ನಿರ್ಮಾಣ ಹಂತದಲ್ಲಿರುವ ಸುಮಾರು 900 ಕೋಟಿ ವೆಚ್ಚದ ಮೇಗಾ ಡೈರಿ ಕಾಮಗಾರಿಗಳನ್ನು ವೀಕ್ಷಿಸಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದು ಕೇವಲ ಒಂದು ಡೇರಿ ಯೋಜನೆ ಅಲ್ಲ, ರಾಜ್ಯ, ದೇಶದ ಹೈನುಗಾರಿಕೆ, ರೈತರ ಆರ್ಥಿಕಾಭಿವೃದ್ಧಿ ಹಾಗೂ ಗ್ರಾಮೀಣ ಬದುಕಿನ ಪರಿವರ್ತನೆಗೆ ಮುಕುಟ ಮಣಿಯಾಗಲಿದೆ ಎಂದು ಆಶಿಸಿದರು.

ಮಕ್ಕಳ ಬೋಟಿಂಗ್, ಮನರಂಜನಾ ರೈಲು ಮಾರ್ಗ, ಅತಿಥಿ ಗೃಹ, ಕಾರಂಜಿ ಮೊದಲಾದ ಎಲ್ಲಾ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚನೆ ನೀಡಿದ ಗೌಡರು, ಉದ್ಘಾಟನಾ ಕಾರ್ಯಕ್ರಮ ಇಡೀ ರಾಷ್ಟ್ರದ ಗಮನ ಸೆಳೆಯುವಂತಿರಬೇಕು ಎಂದು ನಿರ್ದೇಶನ ನೀಡಿದರು.

ಮೆಗಾ ಡೇರಿಯ ನಿರ್ಮಾಣ ಕಾರ್ಯ ಬಹುತೇಕ ಅಂತಿಮ ಹಂತ ತಲುಪಿದ್ದು, ಜರ್ಮನಿ ತಂತ್ರಜ್ಞಾನ ಆಧಾರಿತ ಅತ್ಯಾಧುನಿಕ ಯಂತ್ರೋಪಕರಣ ಅಳವಡಿಸಲಾಗುತ್ತಿದೆ. ಇಂತಹ ತಂತ್ರಜ್ಞಾನ ಬಳಕೆ ಮಾಡಿರುವುದು ದೇಶದಲ್ಲೇ ಮೊದಲು ಎಂದು ಹೇಳಿದರು.

ಹಾಸನ ಜಿಲ್ಲೆಗೆ ಇದು ಹೆಮ್ಮೆಯ ವಿಚಾರವಾಗಿದೆ. ಪ್ರಸ್ತುತ ಹಾಸನ ಹಾಲು ಒಕ್ಕೂಟ ವ್ಯಾಪ್ತಿಯ ಮೂರು ಜಿಲ್ಲೆಗಳಿಂದ ದಿನಕ್ಕೆ 15 ಲಕ್ಷ ಲೀಟರ್ ಹಾಲು ಸಂಗ್ರಹ ಆಗುತ್ತಿದೆ. ಕೆಲವೇ ದಿನಗಳಲ್ಲಿ ಇದು 20 ಲಕ್ಷ ಲೀಟರ್ ಗೆ ಹೆಚ್ಚಲಿದೆ ಎಂದರು.

ಮೆಗಾ ಡೈರಿಗೆ ಕೇಂದ್ರ ಸರ್ಕಾರ 280 ಕೋಟಿ ಅನುದಾನ ನೀಡಿದ್ದು, ರಾಜ್ಯ ಸರ್ಕಾರದಿಂದ ಯಾವುದೇ ಆರ್ಥಿಕ ನೆರವು ದೊರೆತಿಲ್ಲ. ಹಾಗಾಗಿ ರಾಜ್ಯ ಸರ್ಕಾರದ ಯಾವುದೇ ಹಂಗಿಲ್ಲ ಎಂದರು.

ಮೆಗಾ ಡೈರಿಯ ಪರಿಕಲ್ಪನೆಗೆ ರೇವಣ್ಣ ಅವರ ಶ್ರಮ ಹಾಗೂ ದೂರದೃಷ್ಟಿಯೇ ಪ್ರಮುಖ ಕಾರಣವಾಗಿದೆ. ರೇವಣ್ಣ ಕೆಲಸ ಮಾಡುವ ಸ್ವಭಾವದ ವ್ಯಕ್ತಿ. ರೈತರ ಬದುಕು ಉತ್ತಮವಾಗಬೇಕು ಎಂಬ ಉದ್ದೇಶದಿಂದ ಅವರು ಹಗಲಿರುಳು ಶ್ರಮಿಸಿದ್ದಾರೆ. ಈ ಯೋಜನೆಯ ಹಿಂದೆ ಅವರ ಅಪಾರ ಪರಿಶ್ರಮವಿದೆ ಎಂದು ಪ್ರಶಂಸಿಸಿದರು.

ಮೇ 18 ಕ್ಕೆ ತಮಗೆ 94 ವರ್ಷ ತುಂಬುದನ್ನು ಉಲ್ಲೇಖಿಸಿದ ದೇವೇಗೌಡರು,



> ಮೇ 26 ರಂದು ಕೇಂದ್ರ ಕೃಷಿ ಸಚಿವರು ಪ್ರಧಾನ ಮಂತ್ರಿ ಅವರ ರಾಜಕೀಯ ಹಾದಿ ಕುರಿತು ಪುಸ್ತಕ ಬರೆದಿದ್ದಾರೆ. ಅದನ್ನು ನೀವೇ ಬಿಡುಗಡೆ ಮಾಡಬೇಕು ಎಂದು ನನಗೆ ಆಹ್ವಾನ ನೀಡಿದ್ದಾರೆ. ಅಂದು ಪ್ರಧಾನಿ ಅವರೊಂದಿಗೆ ಚರ್ಚಿಸಿ ಹಾಸನಕ್ಕೆ ಬರುವ ದಿನಾಂಕ ನಿಗದಿ ಮಾಡಲಾಗುವುದು.
>
> **– ಹೆಚ್.ಡಿ.ದೇವೇಗೌಡ, ಮಾಜಿ ಪ್ರಧಾನಿ**

ಹೈನುಗಾರಿಕೆ ಗ್ರಾಮೀಣ ಆರ್ಥಿಕತೆಯ ಬೆನ್ನೆಲುಬು. ಈ ಯೋಜನೆ ರಾಜ್ಯದ ರೈತರ ಬದುಕಿನಲ್ಲಿ ಹೊಸ ಆಶಾಭಾವನೆ ಮೂಡಿಸಲಿದೆ ಎಂದರು.

ಇದೇ ಸಂದರ್ಭದಲ್ಲಿ ಹಾಲು ಒಕ್ಕೂಟ ವ್ಯಾಪ್ತಿಯ ಕಡು ಬಡ ರೈತರ ಬದುಕು ಹಸನಾಗಿಸಲು ಹಾಮೂಲ್ ಮತ್ತು ಹೆಚ್‌ಡಿಸಿಸಿ ಬ್ಯಾಂಕ್ ಸಹಯೋಗದಲ್ಲಿ 20 ಸಾವಿರ ಹಸುಗಳನ್ನು ವಿತರಿಸುವ ಯೋಜನೆ ರೂಪಿಸಲಾಗುತ್ತಿದೆ. ಬಡ ರೈತರನ್ನು ಗುರುತಿಸಿ ಹಸುಗಳನ್ನು ನೀಡಿ ಸ್ವಾವಲಂಬಿ ಬದುಕು ರೂಪಿಸುವ ಗುರಿ ಹೊಂದಲಾಗಿದೆ ಎಂದು ಗೌಡರು ತಿಳಿಸಿದರು.

### ಕಾಲೇಜಿನ ಬಗ್ಗೆ ಮೆಚ್ಚುಗೆ

ಇದೇ ವೇಳೆ ಮೊಸಳೆ ಹೊಸಹಳ್ಳಿ ರೈಲು ನಿಲ್ದಾಣದಲ್ಲಿ ಫ್ಲಾಟ್‌ಫಾರ್ಮ್, ಅಂಡರ್ ಪಾಸ್ ನಿರ್ಮಾಣ ಹಾಗೂ ರೈಲ್ವೆ ಸಂಪರ್ಕ ವ್ಯವಸ್ಥೆ ಕುರಿತಂತೆ ರೈಲ್ವೆ ಸಚಿವರೊಂದಿಗೆ ಚರ್ಚಿಸಲಾಗುವುದು ಎಂದರು.

ಗ್ರಾಮೀಣ ಪ್ರದೇಶದಲ್ಲಿ ನಿರ್ಮಾಣವಾಗಿರುವ ಶಿಕ್ಷಣ ಸಂಸ್ಥೆಯೊಂದು ಉತ್ತಮ ರೀತಿಯಲ್ಲಿ ನಡೆಯುತ್ತಿರುವುದಕ್ಕೆ ಗೌಡರು ಮೆಚ್ಚುಗೆ ವ್ಯಕ್ತಪಡಿಸಿದರು.

## ದ್ವೇಷ ರಾಜಕಾರಣ ಎಂದಿಗೂ ಮಾಡಿಲ್ಲ: ರೇವಣ್ಣ

ದ್ವೇಷದ ರಾಜಕಾರಣವೂ ನನಗೆ ಗೊತ್ತಿಲ್ಲ. ಸಮಯ ಬಂದಾಗ ಎಲ್ಲದಕ್ಕೂ ಉತ್ತರ ಕೊಡುತ್ತೇನೆ ಎಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ವಾಗ್ದಾಳಿ ನಡೆಸಿದರು.

ನಮ್ಮ ಜಿಲ್ಲೆಯ ಜನರಿಗೆ ಅನುಕೂಲವಾಗಲಿ ಎಂದು ಇಷ್ಟೆಲ್ಲಾ ಮಾಡಿದ್ದೇನೆ. ಪಾಪದ ಕೆಲಸ ಮಾಡುವುದಾಗಿದ್ದರೆ ಕೆಎಂಎಫ್ ಅಧ್ಯಕ್ಷನಾಗಿದ್ದಾಗ ಕೋಲಾರಕ್ಕೆ ಯುಹೆಚ್‌ಟಿ ಘಟಕ ಕೊಡುತ್ತಿರಲಿಲ್ಲ. ದೇವೇಗೌಡರು, ಕುಮಾರಸ್ವಾಮಿ ಇಲ್ಲದಿದ್ದರೆ ಬೆಂಗಳೂರಿನಲ್ಲಿ ಕೆಎಂಎಫ್ ಡೇರಿ ನಿರ್ಮಾಣವಾಗುತ್ತಿರಲಿಲ್ಲ ಎಂದರು. ಜಿಲ್ಲೆಯನ್ನು ಹಾಳು ಮಾಡಿದ್ದು ಯಾರು ಎಂಬುದನ್ನು ಸಮಯ ಬಂದಾಗ ಹೇಳುತ್ತೇನೆ.

ದೇವೇಗೌಡರು ಇಲ್ಲದಿದ್ದರೆ ನಾವು ಏನೂ ಅಲ್ಲ. ಮುಖ್ಯಮಂತ್ರಿಯಾಗಿದ್ದಾಗ ಹೆಚ್.ಡಿ. ಕುಮಾರಸ್ವಾಮಿ ಜಿಲ್ಲೆಗೆ ಏನೇನು ಕೊಡುಗೆ ಕೊಟ್ಟಿದ್ದಾರೆಂಬುದನ್ನು ಸಾಕ್ಷಿ ಸಮೇತ ಹೇಳುತ್ತೇನೆ. ವಿಮಾನ ನಿಲ್ದಾಣ ಜಾಗ ಕಬಳಿಸಲು ಮಧ್ಯವರ್ತಿಗಳು ಹುಟ್ಟಿಕೊಂಡಿದ್ದಾರೆ. ಆದರೆ ಅದಕ್ಕೆ ಅವಕಾಶ ಮಾಡಿಕೊಡುವುದಿಲ್ಲ. ಜಿಲ್ಲೆಯ ಅಭಿವೃದ್ಧಿಗಾಗಿ ಜೀವಿತದ ಕೊನೆಯ ವರೆಗೆ ಹೋರಾಡುತ್ತೇನೆ. ಕೈಗಾರಿಕಾಭಿವೃದ್ಧಿ, ವಿಮಾನ ನಿಲ್ದಾಣಕ್ಕಾಗಿ ಸಾವಿರಾರು ಎಕರೆ ಮೀಸಲಿಟ್ಟಿದ್ದೇವೆ. ಅದರಲ್ಲಿ ಅರ್ಧ ಎಕರೆ ಜಾಗವನ್ನು ನನ್ನ ಹೆಸರಿಗೆ ಬರೆಸಿಕೊಂಡಿದ್ದೇನಾ ಎಂದು ಖಾರವಾಗಿ ಪ್ರಶ್ನಿಸಿದರು.

ರಾಜ್ಯದ ವಿವಿಧ ಭಾಗಗಳಾದ ಕಲಬುರಗಿ, ಬೀದರ್ ಮೊದಲಾದ ಕಡೆಗಳಿಂದ ಬಂದಿರುವ ಹೆಣ್ಣು ಮಕ್ಕಳು ಇಲ್ಲಿ ಸುರಕ್ಷಿತ ವಾತಾವರಣ ಇದೆ ಎಂದಿದ್ದಾರೆ. ಇದನ್ನು ಕೇಳಿ ತುಂಬಾ ಸಂತೋಷವಾಯಿತು ಎಂದರು.ಪ್ರಾಂಶುಪಾಲರು, ಉಪನ್ಯಾಸಕರು ಹಾಗೂ ಸಿಬ್ಬಂದಿ ಮಕ್ಕಳನ್ನು ತಮ್ಮ ಮಕ್ಕಳಂತೆ ನೋಡಿಕೊಳ್ಳುತ್ತಿದ್ದು, ಒಂದು ಸಣ್ಣ ಅಹಿತಕರ ಘಟನೆಗೂ ಅವಕಾಶ ಕೊಡದೆ ವಿದ್ಯಾರ್ಥಿನಿಯರ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

### 40 ದಿನದಲ್ಲಿ ಕಾಮಗಾರಿ ಪೂರ್ಣ

ಮಾಜಿ ಸಚಿವ ಎಚ್.ಡಿ.ರೇವಣ್ಣ ಮಾತನಾಡಿ, ಜಿಲ್ಲೆಯನ್ನು ಶಿಕ್ಷಣ, ಹೈನುಗಾರಿಕೆ ಹಾಗೂ ಕೈಗಾರಿಕಾ ಕ್ಷೇತ್ರದಲ್ಲಿ ರಾಜ್ಯದಲ್ಲೇ ಪ್ರಥಮ ಸ್ಥಾನಕ್ಕೇರಿಸುವುದು ನಮ್ಮ ಗುರಿ ಎಂದು ಹೇಳಿದರು.



ಮೊಸಳೆ ಹೊಸಳ್ಳಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಸ್ತುತ 2307 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದು, ರಾಜ್ಯದಲ್ಲೇ ಅತ್ಯುತ್ತಮ ಹಾಗೂ 18 ಕಾಲೇಜುಗಳಲ್ಲಿ ನ-01ಕಾಲೇಜಾಗಿದೆ ಎಂದು ತಿಳಿಸಿದರು.

ಅಲ್ಲೇ ಒಳಾಂಗಣ ಕ್ರೀಡಾಂಗಣ ನಿರ್ಮಾಣ ಮಾಡಲು 5 ಕೋಟಿ ಅನುದಾನ ಬೇಕಾಗಿದೆ. ಅದನ್ನು ಕೊಡಿಸಲು ದೇವೇಗೌಡರು ಹಾಗೂ ಕುಮಾರಸ್ವಾಮಿ ಅವರಿಗೆ ಮನವಿ ಮಾಡಲಾಗಿದೆ ಎಂದು ತಿಳಿಸಿದರು.

ಮೆಗಾ ಡೇರಿ ದೇಶದಲ್ಲೇ ಪ್ರಥಮ ಸ್ಥಾನಕ್ಕೇರಬೇಕು ಎಂಬ ಗುರಿಯಿಂದ ಎಲ್ಲಾ ಅಧಿಕಾರಿಗಳು ಹಾಗೂ ಕರ್ನಾಟಕ ಹಾಲು ಮಹಾಮಂಡಳಿ ಸಿಬ್ಬಂದಿ ಶ್ರಮಿಸುತ್ತಿದ್ದಾರೆ.

ಕೇವಲ 15 ಕೋಟಿ ರೂ. ಮೊತ್ತದಿಂದ ಆರಂಭವಾದ ಹಾಮೂಲ್ ಸಂಸ್ಥೆ ಇಂದು 4000 ಕೋಟಿ ಮೌಲ್ಯದ ಆಸ್ತಿಯನ್ನು ಹೊಂದಿದೆ ಎಂದು ಹೆಮ್ಮೆಯಿಂದ ಹೇಳಿದರು.

ಮೆಗಾ ಡೇರಿಗೆ 300 ಕೋಟಿ ರೂ. ಸಾಲ ಪಡೆದಿದ್ದು, ಅದರಲ್ಲಿ 100 ಕೋಟಿ ರೂ. ಈಗಾಗಲೇ ತೀರಿಸಲಾಗಿದೆ. ಐದು ಎಕರೆ ಪ್ರದೇಶದಲ್ಲಿ ಗೋದಾಮು ನಿರ್ಮಾಣ, 150 ಕೋಟಿ ರೂ. ವೆಚ್ಚದ ಪೆಟ್ ಬಾಟಲಿ ಘಟಕ ನಿರ್ಮಿಸಲಾಗಿದೆ ಎಂದರು.

ಜರ್ಮನಿ ತಂತ್ರಜ್ಞಾನ ಸಹಯೋಗದಲ್ಲಿ ನಡೆಯುತ್ತಿರುವ ಬೃಹತ್ ಹಾಲು ಸಂಸ್ಕರಣಾ ಘಟಕ ಮೆಗಾ ಡೇರಿ ಕಾಮಗಾರಿಯನ್ನು 40 ದಿನಗಳಲ್ಲಿ ಪೂರ್ಣಗೊಳಿಸುವ ವಿಶ್ವಾಸವಿದೆ ಎಂದರು.

ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್, ಹಾಮೂಲ್ ಎಂಡಿ ಮಹೇಶ್ ಇದ್ದರು

# ಪ್ರಧಾನಿ ಕುರಿತು ಹಗುರ ಮಾತು ಆಡಬೇಡಿ: ಸಿದ್ದುಗೆ ಟಾಂಗ್



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸಿದ್ದರಾಮಯ್ಯ ಅವರೇ ನೀವು ಜವಾಬ್ದಾರಿಯುತ ಸ್ಥಾನದಲ್ಲಿದ್ದೀರಿ, ಮುಖ್ಯಮಂತ್ರಿ ಆಗಿದ್ದೀರಿ, ಹದಿನಾರು ಬಜೆಟ್ ಮಂಡಿಸಿದ್ದೀರಿ, ಬಹಳ ಅನುಭವಸ್ಥರು. ಹಿಂದೆ ನಡೆದಂತಹ ಕೆಲವು ಘಟನೆಗಳನ್ನು ಮೆಲುಕು ಹಾಕಿ ಮಾತನಾಡಿದರೆ ನಿಮ್ಮ ಸ್ಥಾನದ ಗೌರವ ಉಳಿಯುತ್ತೆ ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಟಾಂಗ್ ನೀಡಿದರು.

ತಾಲ್ಲೂಕಿನ ಮೊಸಳೆಹೊಸಹಳ್ಳಿಯಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಂತಾರಾಷ್ಟ್ರೀಯ ಮಟ್ಟದಲ್ಲಿ ಏರುಪೇರುಗಳಾದ ದೇಶದ ಹಿತದೃಷ್ಟಿಯಿಂದ ಕೆಲವು ನಿರ್ಧಾರ ಕೈಗೊಳ್ಳುವುದು ಜವಾಬ್ದಾರಿಯಾಗಿರುತ್ತದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇತಿಹಾಸ ಅರಿತು ಮಾತನಾಡಬೇಕು ಎಂದರು.

ಇರಾನ್, ಇಸ್ರೇಲ್-ಅಮೇರಿಕ ನಡುವೆ 40 ದಿನ ಯುದ್ಧ ನಡೆದಿದೆ. ಭಾರತದ ಹಡಗು ಗಲ್ಫ್‌ನಲ್ಲಿ ಮುಳುಗಿದೆ. ಇವುಗಳೆಲ್ಲ ರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ಘಟನೆಗಳು.

ಅದಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಹೊಣೆಗಾರರನ್ನಾಗಿಸುವುದು ಸರಿಯಲ್ಲ. ಮೂರು ರಾಷ್ಟ್ರಗಳಲ್ಲಿ ಹಿಂದೆಂದೂ ಕಾಣದಂತಹ ಯುದ್ಧ ನಡೆದಿದೆ. ಅದರ ಬಗ್ಗೆ ನಮ್ಮ ಮುಖ್ಯಮಂತ್ರಿ ಲಘುವಾಗಿ ಮಾತನಾಡಿದ್ದಾರೆ ಎಂದರು.

ಬಾಂಗ್ಲಾದೇಶ-ಪಾಕಿಸ್ತಾನ ನಡುವೆ ಯುದ್ಧದ ಸಂದರ್ಭದಲ್ಲಿ ಜಗಜೀವನ್ ರಾಮ್ ರಕ್ಷಣಾ ಸಚಿವರಾಗಿದ್ದರು. ಆಗ ಪ್ರಧಾನಿಯಾಗಿದ್ದ ಇಂದಿರಾ ಗಾಂಧಿ ರಾಮಲೀಲಾ ಮೈದಾನದಲ್ಲಿ ಏನು ಭಾಷಣ ಮಾಡಿದ್ದರು ನೆನಪಿದೆಯೇ ಎಂದು ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದರು.

ಆಗ ಒಂದು ಕೆ.ಜಿ. ಸಕ್ಕರೆ ಬೆಲೆ 18 ರೂ., ಲೀಟರ್ ಸೀಮೆ ಎಣ್ಣೆ 12 ರೂ.ಗೆ ಏರಿಕೆಯಾಗಿದ್ದನ್ನು ಮಿಸ್ಟರ್ ಸಿದ್ದರಾಮಯ್ಯ ಮರೆತಿದ್ದಾರೆ. ಒಂದು ದಿನ ಟೀ ಕುಡಿಯೋದು ಬಿಡಿ, ವಾರದಲ್ಲಿ ಒಂದು ದಿನ ಊಟ ಮಾಡುವುದನ್ನು ಬಿಡಿ. ದಿನಕ್ಕೆ ಒಂದು ಬಾರಿ ಮಾತ್ರ ಟೀ ಕುಡಿಯಿರಿ ಎಂದು ಇಂದಿರಾ ಗಾಂಧಿ ಹೇಳಿದ್ದರು. ಅವರು ಈ ರೀತಿ ಭಾಷಣ ಮಾಡಿದಾಗ ಸಭೆಯಲ್ಲಿ ಕೋಲಾಹಲ ಉಂಟಾಯಿತು. ಇಂದಿರಾ ಗಾಂಧಿ ಅವರನ್ನು ಪೊಲೀಸರು ರಕ್ಷಿಸಿ ಕರೆದೊಯ್ದರು. ಕೇವಲ ಒಂದು ಸಣ್ಣ ಯುದ್ಧ ಇಷ್ಟೆಲ್ಲ ಸಮಸ್ಯೆ ಸೃಷ್ಟಿಸಿತು. ಇನ್ನು 40 ದಿನಗಳ ನಿರಂತರ ಯುದ್ಧ ಯಾವ ರೀತಿ ಪರಿಣಾಮ ಬೀರಿದೆ ಎಂಬುದನ್ನು ಅರಿಯಬೇಕಲ್ಲವೇ ಎಂದು ಹರಿಹಾಯ್ದರು.

ಪೆಟ್ರೋಲ್, ಡಿಸೇಲ್, ಅಡುಗೆ ಎಣ್ಣೆ ಬಳಕೆಯನ್ನು ಕಡಿಮೆ ಮಾಡಿ. ಸದ್ಯ ವಿದೇಶಿ ಪ್ರವಾಸ ಮಾಡುವುದು ಬೇಡವೆಂದು ಪ್ರಧಾನಿ ಹೇಳಿದ್ದಾರೆ. ಸಿದ್ದರಾಮಯ್ಯ ಅವರು ಬಹಳ ದೊಡ್ಡ ಪಾಂಡಿತ್ಯವಂತರು. ಈ ಬಗ್ಗೆ ಮಾತನಾಡಿದ್ದಾರೆ. ನೀವು ಪ್ರಧಾನ ಮಂತ್ರಿ ಬಗ್ಗೆ ಲಘುವಾಗಿ ಮಾತನಾಡಿದರೆ ಅದರಿಂದ ಏನೂ ಆಗುವುದಿಲ್ಲ. ಈ ದೇಶದ 145 ಕೋಟಿ ಜನರ ಪ್ರಧಾನಿಯಾಗುವ ಶಕ್ತಿ ಒಬ್ಬರಿಗೆ ಇರೋದು ಎಂಬುದನ್ನು ಮೋದಿ ಸಾಬೀತುಪಡಿಸಿದ್ದಾರೆ. ರಾಜಕೀಯದಲ್ಲಿ ನನಗೆ 65 ವರ್ಷಗಳ ಅನುಭವವಿದೆ. ಮೋದಿ ವಿಶ್ವದ ಶ್ರೇಷ್ಠ ನಾಯಕರಾಗಿ ಬೆಳೆದಿದ್ದಾರೆ. ಅವರ ಬಗ್ಗೆ ಲಘುವಾಗಿ ಮಾತನಾಡದೆ ಸ್ವಲ್ಪ ಯೋಚನೆ ಮಾಡಿ ಮಾತನಾಡಿ ಎಂದು ಸಲಹೆ ನೀಡಿದರು.

ತಮಿಳುನಾಡು ನೂತನ ಮುಖ್ಯಮಂತ್ರಿ ಜೋಸೆಫ್ ವಿಜಯ್ ಗೆಲುವು ಖುಷಿ ತಂದಿದೆ. ಆ ರಾಜ್ಯದಲ್ಲಿ ಒಂದು ಹೊಸ ಶಕ್ತಿ ಸೃಷ್ಟಿಯಾಗಿದೆ. ಡಿಎಂಕೆ-ಎಐಎಡಿಎಂಕೆ, ಕಾಂಗ್ರೆಸ್ ಪಕ್ಷವನ್ನು ಸೋಲಿಸಿದ್ದಾರೆ. ಕೆ.ಕಾಮರಾಜ್ ಅವರಿಂದ ಎಂಎಜಿಆರ್, ಕರುಣಾನಿಧಿ, ಜಯಲಲಿತಾ ಅವರೆಲ್ಲರ ನಾಯಕತ್ವವನ್ನು ಹಿಂದಕ್ಕೆ ಸರಿಸಿ ವಿಜಯ್ ಅವರು ಬಹಳ ಮುಂದೆ ಹೋಗಿದ್ದಾರೆ. ವಿಜಯ್ ಅವರು ಎಲ್ಲೇ ಹೋದರು 40 ರಿಂದ 50 ಲಕ್ಷ ಜನರು ಸೇರುತ್ತಾರೆ. ಒಬ್ಬ ಸಾಮಾನ್ಯ ಸಹಾಯಕ ನಿರ್ದೇಶಕನ ಮಗ ಎತ್ತರಕ್ಕೆ ಬೆಳೆದಿದ್ದು ಅವರನ್ನು ಅಭಿನಂದಿಸುತ್ತೇನೆ ಎಂದರು.

# ಅಂಬೇಡ್ಕರ್ ತತ್ವಾದರ್ಶ ಪಾಲನೆ ಎಲ್ಲರ ಹೊಣೆ: ಸಿಮೆಂಟ್ ಮಂಜು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಡಾ. ಬಿ.ಆರ್. ಅಂಬೇಡ್ಕರ್ ಅವರು ದೇಶಕ್ಕೆ ನೀಡಿದ ಸಂವಿಧಾನವು ಎಲ್ಲ ವರ್ಗಗಳ ಜನರಿಗೆ ಸಮಾನ ಹಕ್ಕು ಮತ್ತು ಸಾಮಾಜಿಕ ನ್ಯಾಯವನ್ನು ಒದಗಿಸಿದೆ. ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಅಧಿಕಾರಿಗಳು ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಸಕಲೇಶಪುರ ಘಟಕ-ಚಿಕ್ಕಮಗಳೂರು ವಿಭಾಗದ ವತಿಯಿಂದ ಕೆಎಸ್‌ಆರ್‌ಟಿಸಿ ಡಿಪೋ ಆವರಣದಲ್ಲಿ ಆಯೋಜಿಸಿದ್ದ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

ಶಿಕ್ಷಣ, ಸಂಘಟನೆ ಮತ್ತು ಹೋರಾಟದ ಮೂಲಕ ಸಮಾಜದಲ್ಲಿ ಬದಲಾವಣೆ ತರಬೇಕೆಂಬ ಅಂಬೇಡ್ಕರ್ ಅವರ ಸಂದೇಶ ಇಂದಿಗೂ ಪ್ರಸ್ತುತವಾಗಿದೆ. ಸಾಮಾಜಿಕ ನ್ಯಾಯ, ಸಮಾನತೆ ಹಾಗೂ ಸಹೋದರತ್ವದ ತತ್ವಗಳನ್ನು ಅಂಬೇಡ್ಕರ್ ದೇಶಕ್ಕೆ ನೀಡಿದ್ದು,




ಇವುಗಳನ್ನು ಕಾಪಾಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ತಿಳಿಸಿದರು.

ಶಿಕ್ಷಣವೇ ಸಮಾಜ ಪರಿವರ್ತನೆಯ ಶಕ್ತಿಯಾಗಿದ್ದು, ಶಿಕ್ಷಣದ ಮೂಲಕವೇ ಅಭಿವೃದ್ಧಿ ಸಾಧಿಸಬಹುದು. ಸಮಾಜದಲ್ಲಿ ಜಾತಿ ಭೇದ ಹಾಗೂ ಅಸಮಾನತೆ ನಿವಾರಣೆಗೆ ಎಲ್ಲರೂ ದೇಶ ಮೊದಲು ಎಂಬ ಮನೋಭಾವದಿಂದ ಒಗ್ಗಟ್ಟಾಗಿ ಕೆಲಸ ಮಾಡಬೇಕು ಎಂದು ಕರೆ ನೀಡಿದರು.

ಪತ್ರಕರ್ತ ನಾಗರಾಜು ಹೆತ್ತೂರು ಮಾತನಾಡಿ, ಡಾ. ಬಿ.ಆರ್. ಅಂಬೇಡ್ಕರ್ ಅವರು ಕೇವಲ ಒಂದು ಸಮುದಾಯದ ನಾಯಕನಲ್ಲ, ಇಡೀ ದೇಶದ ಸಾಮಾಜಿಕ ನ್ಯಾಯದ ದಿಕ್ಕು ತೋರಿದ ಮಹಾನ್ ಚಿಂತಕರಾಗಿದ್ದಾರೆ ಎಂದು ಹೇಳಿದರು.

ಸಮಾಜದಲ್ಲಿ ಶಿಕ್ಷಣ, ಸಮಾನತೆ ಹಾಗೂ ಸ್ವಾಭಿಮಾನ ಬೆಳೆಸುವಲ್ಲಿ ಅಂಬೇಡ್ಕರ್ ಅವರ ಹೋರಾಟ ಇಂದಿಗೂ ಯುವಜನತೆಗೆ ಪ್ರೇರಣೆಯಾಗಿದ್ದು, ಅವರ ತತ್ವ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಸಂವಿಧಾನವು ಪ್ರತಿಯೊಬ್ಬ ನಾಗರಿಕನಿಗೂ ಸಮಾನ ಹಕ್ಕುಗಳನ್ನು ನೀಡಿದ್ದು, ಅದರ ಮೌಲ್ಯಗಳನ್ನು ಕಾಪಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಹೇಳಿದರು. ಇಂದಿನ ಸಮಾಜದಲ್ಲಿ ಅಸಮಾನತೆ, ದೌರ್ಜನ್ಯ ಹಾಗೂ ಸಾಮಾಜಿಕ ಅನ್ಯಾಯಗಳ ವಿರುದ್ಧ ಧ್ವನಿ ಎತ್ತುವ ಅಗತ್ಯವಿದ್ದು, ಅಂಬೇಡ್ಕರ್ ಅವರ ವಿಚಾರಧಾರೆಗಳು ಯುವ ಪೀಳಿಗೆಗೆ ದಾರಿದೀಪವಾಗಬೇಕು ಎಂದು ಅಭಿಪ್ರಾಯಪಟ್ಟರು.

ಚಿಕ್ಕಮಗಳೂರು ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಸತೀಶ್ ವಿ ಮಾತನಾಡಿ, ಸರ್ಕಾರಿ ನೌಕರರು ಸಮಾಜದಲ್ಲಿ ಸಮಾನತೆ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯ ಅಂಬೇಡ್ಕರ್ ಪ್ರಶಸ್ತಿ ವಿಜೇತ, ದಲಿತ ಸಂಘರ್ಷ ಸಮಿತಿ ರಾಜ್ಯ ಸಂಯೋಜಕ ಅಣ್ಣಯ್ಯ ಹೆತ್ತೂರು ಹಾಗೂ ಸಫಾಯಿ ಕರ್ಮಚಾರಿ ಲಕ್ಷ್ಮೀ ಅವರನ್ನು ಸನ್ಮಾನಿಸಲಾಯಿತು.

ರಾಜ್ಯ ಸಮಿತಿಯ ರಾಜ್ಯಾಧ್ಯಕ್ಷ ಎನ್. ರವೀಂದ್ರ, ಗೌರವಾಧ್ಯಕ್ಷ ಹಿರೇಮಗಳೂರು ರಾಮಚಂದ್ರ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶಾಂತರಾಜು ಸಿಡಿಗಳಲೆ, ಕಾನೂನು ಸಲಹೆಗಾರ ಆರ್. ಅನಿಲ್ ಕುಮಾರ್, ಜಿಲ್ಲಾ ಸಂಯೋಜಕ ಎಂ.ಎಸ್. ಯೋಗೇಶ್, ಮಹಿಳಾ ಜಾಗೃತಿ ಮಾರ್ಗದರ್ಶಿ ಅಸೋಸಿಯೇಷನ್ ಅಧ್ಯಕ್ಷೆ ಕಲ್ಪನಾ ಕೀರ್ತಿ, ಪ್ರಾದೇಶಿಕ ತರಬೇತಿ ಕೇಂದ್ರದ ಪ್ರಾಂಶುಪಾಲ ಅಬ್ದುಲ್ ಖುದ್ದೂಸ್, ವಿಭಾಗೀಯ ಯಾಂತ್ರಿಕ ಅಭಿಯಂತರ ಶಿವಲಿಂಗಯ್ಯ ಇತರರಿದ್ದರು.


# ಡ್ರಗ್ಸ್ ಜಾಲ: ಅಮಲು ವಸ್ತು ಸಮೇತ 17 ವರ್ಷದ ಬಾಲಕ ಸೆರೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಪಟ್ಟಣದಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಡ್ರಗ್ಸ್ ಹಾವಳಿಗೆ ಕಡಿವಾಣ ಹಾಕುವ ಉದ್ದೇಶದಿಂದ ಕಾರ್ಯನಿರ್ವಹಿಸುತ್ತಿರುವ ಆಡ್ರಗ್ಸ್ ಮುಕ್ತ ಸಕಲೇಶಪುರಟಿ ಆಂದೋಲನದ ಕಾರ್ಯಕರ್ತರು ಅಮಲು ವಸ್ತು ಮಾರಾಟ ಮಾಡುತ್ತಿದ್ದ 17 ವರ್ಷದ ಬಾಲಕನನ್ನು ಮಾಲು ಸಮೇತ ಹಿಡಿದು ಅಬಕಾರಿ ಇಲಾಖೆಗೆ ಒಪ್ಪಿಸಿದ್ದಾರೆ.

ಪಟ್ಟಣದ ಹಳೆ ಬಸ್ ನಿಲ್ದಾಣದ ಸಮೀಪದ ಕಾಕಾ ಟೀ ಶಾಪ್ ಮುಂಭಾಗದಲ್ಲಿ ಎಂಡಿಎಂಎ ಮಾದರಿಯ ಡ್ರಗ್ಸ್ ಮಾರಾಟ ಮಾಡಲು ಯತ್ನಿಸುತ್ತಿದ್ದ ವೇಳೆ ಕಾರ್ಯಕರ್ತರು ದಾಳಿ ನಡೆಸಿದ್ದಾರೆ.

ಡ್ರಗ್ಸ್ ಸಾಗಾಟ ಹಾಗೂ ವಿತರಣೆಗೆ ಬಳಸಲಾಗುತ್ತಿದ್ದ ಕಾರೊಂದರಲ್ಲಿ ಅಮಲು



ವಸ್ತು ಸಾಗಿಸಲಾಗುತ್ತಿತ್ತು ಎಂಬ ಮಾಹಿತಿ ಮೇರೆ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು.

### ಮೂರು ತಿಂಗಳ ಗುಪ್ತ ಕಾರ್ಯಾಚರಣೆ

ಸಕಲೇಶಪುರದಲ್ಲಿ ಡ್ರಗ್ಸ್ ಜಾಲ ಸಕ್ರಿಯವಾಗಿರುವ ಬಗ್ಗೆ ಖಚಿತ ಮಾಹಿತಿ ಪಡೆದಿದ್ದ ಡ್ರಗ್ಸ್ ಮುಕ್ತ ಸಕಲೇಶಪುರ ಆಂದೋಲನದ ಕಾರ್ಯಕರ್ತರು ಕಳೆದ ಮೂರು ತಿಂಗಳಿನಿಂದ ಗುಪ್ತ ನಿಗಾವಳಿ ನಡೆಸುತ್ತಿದ್ದರು ಎನ್ನಲಾಗಿದೆ. ಕೊನೆಗೂ ಅಮಲು ವಸ್ತು ಸಮೇತ ಬಾಲಕನನ್ನು ಹಿಡಿದು ಅಬಕಾರಿ ಇಲಾಖೆಗೆ ಒಪ್ಪಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ಅಬಕಾರಿ ಇಲಾಖೆಯ ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ. ಆರೋಪಿ ಅಪ್ರಾಪ್ತ ವಯಸ್ಸಿನವನಾಗಿರುವ ಹಿನ್ನಲೆಯಲ್ಲಿ ಕಾನೂನು ಪ್ರಕ್ರಿಯೆಯಂತೆ ಮುಂದಿನ ಕ್ರಮ ಕೈಗೊಂಡು ಬಿಡುಗಡೆ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

## ಫೇಕ್ ಹನಿ ಟ್ರ್ಯಾಪ್ ಪ್ರಕರಣದಲ್ಲೂ ಇದೇ ಗ್ಯಾಂಗ್

ಸಕಲೇಶಪುರದ ಕಾಲೇಜೊಂದರ ಪ್ರಾಂಶುಪಾಲರನ್ನು ನಕಲಿ ಹನಿ ಟ್ರ್ಯಾಪ್ ವಿಡಿಯೋ ಮೂಲಕ ಬ್ಲಾಕ್‌ಮೇಲ್ ಮಾಡಿ ಹಣಕ್ಕೆ ಬೇಡಿಕೆ ಇಟ್ಟ ಪ್ರಕರಣದಲ್ಲೂ ಇದೇ ಗ್ಯಾಂಗ್ ಹೆಸರು ಕೇಳಿಬಂದಿತ್ತು ಎನ್ನಲಾಗಿದ್ದು, ಈ ಸಂಬಂಧ ತನಿಖೆ ನಡೆಯುತ್ತಿದೆ ಎಂಬ ಮಾಹಿತಿ ಲಭ್ಯವಾಗಿದೆ. ಈ ಪ್ರಕರಣದಲ್ಲಿ ನಿಷ್ಪಕ್ಷಪಾತ ಹಾಗೂ ಸಮಗ್ರ ತನಿಖೆ ನಡೆದರೆ ಡ್ರಗ್ಸ್ ಜಾಲದ ಹಿಂದೆ ಕಾರ್ಯನಿರ್ವಹಿಸುತ್ತಿರುವ ಪ್ರಭಾವಿ ವ್ಯಕ್ತಿಗಳ ಮುಖವಾಡ ಬಯಲಾಗುವ ಸಾಧ್ಯತೆ ಇದೆ.


ಪ್ರಕರಣದ ಬೆನ್ನಲ್ಲೇ ಡ್ರಗ್ಸ್ ಜಾಲದ ಇನ್ನಷ್ಟು ದಲ್ಲಾಳಿಗಳು ಹಾಗೂ ಪ್ರಮುಖ ಆರೋಪಿಗಳನ್ನು ಬಂಧಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

ಆರೋಪಿಗೆ ಸಂಬಂಧಿಸಿದಂತೆ ಹಲವು ಕ್ರಿಮಿನಲ್ ಚಟುವಟಿಕೆಗಳ ಕುರಿತು ಸ್ಥಳೀಯ ವಲಯಗಳಲ್ಲಿ ಚರ್ಚೆಗಳು ಕೇಳಿಬರುತ್ತಿವೆ. ಕೆಲವು ಪ್ರಭಾವಿ ವ್ಯಕ್ತಿಗಳ ಬೆಂಬಲದಿಂದ ಪಟ್ಟಣದಲ್ಲಿ ಡ್ರಗ್ಸ್ ಜಾಲ ವಿಸ್ತರಿಸುತ್ತಿದೆ ಎಂಬ ಆರೋಪವೂ ಸಾರ್ವಜನಿಕ ವಲಯದಲ್ಲಿ ಕೇಳಿಬಂದಿದೆ.

# ಬೇಲೂರು ಪುರಸಭೆ ಅಧ್ಯಕ್ಷರಾಗಿ ಅಕ್ರಂ ಷರೀಫ್ ಆಯ್ಕೆ

## ಮೂರು ಪಕ್ಷಗಳ ಸಹಕಾರದಿಂದ ಗೆಲುವು : ಅಕ್ರಂ ಷರೀಫ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಬೇಲೂರು: ಪುರಸಭಾ ಅಧ್ಯಕ್ಷರಾಗಿ 23ನೇ ವಾರ್ಡ್ ಸದಸ್ಯ ಅಕ್ರಂ ಷರೀಫ್ ಅವರು ಅವಿರೋಧ ಆಯ್ಕೆಯಾದರು.

ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿ ಹಾಗೂ ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ ಆಯ್ಕೆ ಘೋಷಿಸಿದರು. ಪುರಸಭೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸ್ಪಷ್ಟ ಬಹುಮತವಿದ್ದರೂ ಪಕ್ಷದಲ್ಲಿನ ಒಳಜಗಳದ ಪರಿಣಾಮ ಜೆಡಿಎಸ್ ಸದಸ್ಯರ ಬೆಂಬಲದೊಂದಿಗೆ 23 ಷರೀಫ್ ಅಧ್ಯಕ್ಷರಾಗಿ ಆಯ್ಕೆಯಾದರು.

23 ಸದಸ್ಯರ ಪೈಕಿ 17 ಕಾಂಗ್ರೆಸ್ ಸದಸ್ಯರು, 5 ಜೆಡಿಎಸ್, ಒಬ್ಬ ಬಿಜೆಪಿ ಸದಸ್ಯರ ಪೈಕಿ ಎ.ಆರ್. ಅಶೋಕ್ ರಾಜೀನಾಮೆ ನೀಡದೆ ಕೋರ್ಟ್ ಮೊರೆ ಹೋದಾಗ ಒಂದು ವರ್ಷದ ತನಕ 15ನೇ ವಾರ್ಡ್‌ನ ಉಷಾ ಸತೀಶ್ ಪ್ರಭಾರ ಅಧ್ಯಕ್ಷರಾಗಿ 11 ತಿಂಗಳು ಮುಂದುವರೆದಿದ್ದರು. ಅಶೋಕ್ ಕೋರ್ಟ್ ಕೇಸ್ ಹಿಂಪಡೆದ ಹಿನ್ನೆಲೆಯಲ್ಲಿ ಚುನಾವಣೆ ನಿಗದಿಯಾಗಿತ್ತು. ಬಹುತೇಕ ಅಕ್ರಂ ಷರೀಫ್ ಆಯ್ಕೆಯಾವುದು ಖಚಿತ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷದ ಕೆಲ ಸದಸ್ಯರು ಮುನಿಸಿಕೊಂಡಿದ್ದರ ಪರಿಣಾಮ ಬಹುಮತಕ್ಕೆ 13 ಸದಸ್ಯರ ಅವಶ್ಯಕತೆಗೆ ಜೆಡಿಎಸ್ ಹಾಗೂ ಬಿಜೆಪಿ ಪಕ್ಷದ ಸದಸ್ಯರ ವಿಶ್ವಾಸ ಪಡೆದುಕೊಡು ಅಧ್ಯಕ್ಷರಾಗಿ ಆಯ್ಕೆಯಾದರು.

ಪುರಸಭೆ ಅಧ್ಯಕ್ಷರಾಗಿ ಆಯ್ಕೆಯಾದ ಬಳಿಕ ಮಾತನಾಡಿದ ಅಕ್ರಂ ಷರೀಫ್, ಪುರಸಭಾ ಅಧ್ಯಕ್ಷನಾಗಲು ಹಿರಿಯರಾದ ಬಿ. ಶಿವರಾಂ, ಎಂ.ಜಿ. ನಿಶಾಂತ್, ಎಂ.ಆರ್. ವೆಂಕಟೇಶ್, ಇಕ್ಬಾಲ್ ಅಹಮದ್ ಸೇರಿ ಜೆಡಿಎಸ್ ಮತ್ತು ಬಿಜೆಪಿ ಸದಸ್ಯರು ನನಗೆ ಧೈರ್ಯ ತುಂಬಿದರು. ಇಷ್ಟು ದಿನ ನನ್ನ ಜೊತೆಗಿದ ಜೆಡಿಎಸ್ ಸದಸ್ಯ ಶೈಲೇಶ್, ಜಗದೀಶ್, ಪ್ರಭಾಕರ್, ವೆಂಕಟೇಶ್, ಪುಟ್ಟಸ್ವಾಮಿ, ಜಮೀಲಾ, ಅಶೋಕ್, ಉಷಾ, ರತ್ನ ಸತ್ಯನಾರಾಯಣ, ಸೌಮ್ಯ ಸುಬ್ರಮಣ್ಯ ದಿವ್ಯ ಗಿರೀಶ್ ಸೇರಿದಂತೆ ಎಲ್ಲಾ ಸದಸ್ಯರ ಬಹುಮತದ ಬೆಂಬಲ ನೀಡಿ ಇಂದು ನನ್ನನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ ಎಂದು ಹೇಳಿದರು.

ಶಿವರಾಮಣ್ಣ ಅವರು ಆರಂಭದಿಂದಲೂ ತಮ್ಮ ಪರವಾಗಿ ನಿಂತು ಪ್ರೋತ್ಸಾಹ ನೀಡಿದ ಬಗ್ಗೆ ವಿಶೇಷವಾಗಿ ಉಲ್ಲೇಖಿಸಿದ ಅಕ್ರಂ ಶರೀಫ್, ಕಾಂಗ್ರೆಸ್ ಪಕ್ಷದಲ್ಲೇ ನೀನು ಮುಂದುವರೆಯಬೇಕು ಎಂದು ಅವರು ನನ್ನಲ್ಲಿ ಆತ್ಮವಿಶ್ವಾಸ ತುಂಬಿದರು. ಅವರ ಬೆಂಬಲ ನನಗೆ ಬಹಳ ಸಂತೋಷ ತಂದಿದೆ ಎಂದರು.

ಜೆಡಿಎಸ್ ಹಾಗೂ ಬಿಜೆಪಿ ಬೆಂಬಲದ ಕುರಿತು ಪತ್ರಕರ್ತರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಎಲ್ಲಾ ಪಕ್ಷದವರೂ ಸ್ನೇಹಭಾವದಿಂದ ಬೆಂಬಲ ನೀಡಿದ್ದಾರೆ. ಬಿಜೆಪಿ, ಜೆಡಿಎಸ್ ಸದಸ್ಯರು ಸಹ ನನ್ನೊಂದಿಗೆ ಇದ್ದರು. ಆದರೆ ಮುಖ್ಯವಾಗಿ ಕಾಂಗ್ರೆಸ್ ಮುಖಂಡರಾದ ನಿಶಾಂತ್, ಎಂ.ಆರ್ ವೆಂಕಟೇಶ್ ಹಾಗೂ ಶಿವರಾಮಣ್ಣ ಅವರ ಮಾರ್ಗದರ್ಶನವೇ ನನ್ನ ಗೆಲುವಿಗೆ ಕಾರಣ, ಎಂದು ಹೇಳಿದರು.

ಪುರಸಭಾ ಮಾಜಿ ಅಧ್ಯಕ್ಷ ಎ.ಆರ್.ಅಶೋಕ್ ಮಾತನಾಡಿ, ಜೆಡಿಎಸ್, ಬಿಜೆಪಿ ಹಾಗೂ ಕಾಂಗ್ರೆಸ್ ಮೂರು ಪಕ್ಷಗಳ ಬೆಂಬಲದೊಂದಿಗೆ ಅಕ್ರಂ ಶರೀಫ್ ಅವರನ್ನು ಪುರಸಭೆಯ ನೂತನ ಅಧ್ಯಕ್ಷರಾಗಿ ಆಯ್ಕೆ ಮಾಡಲಾಗಿದೆ. ಮೂರು ಪಕ್ಷದವರು ಒಂದಾಗಿ ಸೇರಿ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೇವೆ. ಈ ಹಿಂದೆಯೂ ನಾನು ಅಧ್ಯಕ್ಷನಾಗುವಾಗ ಎಲ್ಲಾ ಪಕ್ಷಗಳ ಸಹಕಾರ ಸಿಕ್ಕಿತ್ತು. ಅದೇ ರೀತಿಯಲ್ಲಿ ಇಂದು ಅಕ್ರಂ ಶರೀಫ್ ಅವರಿಗೆ ಸಹ ಎಲ್ಲರ ಬೆಂಬಲ ದೊರೆತಿದೆ ಎಂದರು.

ಮುಂದಿನ ಐದು ತಿಂಗಳ ಅವಧಿಯಲ್ಲಿ ಅಕ್ರಂ ಶರೀಫ್ ಅವರು ಉತ್ತಮ ಆಡಳಿತ ನೀಡಿ, ಬೇಲೂರಿನಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಒಳ್ಳೆಯ ಹೆಸರು ಗಳಿಸಲಿ ಎಂದು ಶುಭ ಹಾರೈಸಿದರು.

ಸದಸ್ಯ ಬಿ.ಸಿ. ಜಗದೀಶ್ ಮಾತನಾಡಿ, ಜೆಡಿಎಸ್, ಬಿಜೆಪಿ ಹಾಗೂ ಕಾಂಗ್ರೆಸ್ ಸದಸ್ಯರು ಪಕ್ಷಾತೀತವಾಗಿ ಒಗ್ಗೂಡಿ ಒಮ್ಮತದ ನಿರ್ಧಾರದ ಮೂಲಕ ಅಕ್ರಂ ಶರೀಫ್ ಅವರನ್ನು ಅಧ್ಯಕ್ಷರ ಗಾದಿಗೆ ಕೂರಿಸಲಾಗಿದೆ. ಅಕ್ರಂ ಶರೀಫ್ ಅವರನ್ನು ಅಧ್ಯಕ್ಷ ಸ್ಥಾನಕ್ಕೆ ತರಲು ಪುರಸಭಾ ಮಾಜಿ ಅಧ್ಯಕ್ಷ ಎ.ಆರ್. ಅಶೋಕ್ ಅವರ ಪಾತ್ರ ಪ್ರಮುಖವಾಗಿತ್ತು ಎಂದು ಹೇಳಿದರು.

ನೂತನ ಅಧ್ಯಕ್ಷ ಅಕ್ರಮ್ ಶರೀಫ್ ಅವರಿಗೆ ಐದು ತಿಂಗಳ ಅಧಿಕಾರಾವಧಿ ಲಭಿಸಿದ್ದು, ಈ ಅವಧಿಯಲ್ಲಿ ಪುರಸಭೆಯ ಅಭಿವೃದ್ಧಿ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಿಕೊಂಡು ಹೋಗಲಿ ಎಂದರು.

ಪುರಸಭಾ ಸದಸ್ಯರಾದ ತೀರ್ಥಕುಮಾರಿ ಎಂ.ಆರ್. ವೆಂಕಟೇಶ್, ಉಷಾ ಸತೀಶ್, ಮಿನಾಕ್ಷಿ, ಜಮೀಲ, ಮಣಿ ಶೇಖರರ್, ಆಶಾ ರಾಣಿ, ಜಮಾಲುದ್ದೀನ್, ಸೌಮ್ಯ, ಪುಟ್ಟಸ್ವಾಮಿ, ದಿವ್ಯ ಗಿರೀಶ್, ಶೈಲೇಶ್, ಪ್ರಭಾಕರ್, ಸತ್ಯನಾರಾಯಣ ಇತರರಿದ್ದರು.

# ಮಾಗಲು ಗ್ರಾಮದಲ್ಲಿ ಕೆಂಚಾಂಬಿಕೆಯ ಸುಗ್ಗಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಶ್ರೀ ಕೆಂಚಾಂಬಿಕೆ ದೊಡ್ಡಜಾತ್ರೆಗೆ ಸಂಬಂಧಿಸಿದ 48 ಹಳ್ಳಿಗಳ ಪೈಕಿ, ಯಸಳೂರು ಹೋಬಳಿ ಮಾಗಲು ಗ್ರಾಮದ ಕೆಂಚಾಂಬಿಕೆ ಕಟ್ಟೆಯಲ್ಲಿ ಹಗಲು ಸುಗ್ಗಿಯು ವಿಜೃಂಭಣೆಯಿಂದ ನಡೆಯಿತು.

ಗ್ರಾಮದ ಪಟೇಲರು, ಹಿರಿಯರ ಸಮ್ಮುಖದಲ್ಲಿ ನರಹರಿಭಟ್ ಹಾಗೂ ಸಂಗಡಿಗರ ನೇತೃತ್ವದ ಪುರೋಹಿತವರ್ಗ ಅಭಿಷೇಕ, ಅಲಂಕಾರ, ಪೂಜೆ, ಮಹಾಮಂಗಳಾರತಿ ನೆರವೇರಿಸಿದರು. ನಂತರ ದೇವಿಗೆ ಕೆಂಡಕೊಂಡ ಸೇವೆ ನಡೆಯಿತು. ಹಲವಾರು ಭಕ್ತರು ಹರಕೆ ಸಲ್ಲಿಕೆಯ ರೂಪದಲ್ಲಿ ಕೆಂಡ ಹಾಯ್ದು ತಮ್ಮ ಭಕ್ತಿ ಮೆರೆದರು. ಸುಗ್ಗಿ ಕಟ್ಟೆಯಲ್ಲಿ ಗ್ರಾಮದ ಪುರುಷರು, ಮಹಿಳೆಯರು, ಯುವಕ, ಯುವತಿಯರು ಸುಗ್ಗಿ ಕುಣಿದು ಪುರಾತನ ಜಾನಪದ ಕಲೆಗೆ ಮೆರಗು ತಂದರು.

ಇತಿಹಾಸ: ಮಾಗಲು ಗ್ರಾಮದಲ್ಲಿ ಶ್ರೀ ಕೆಂಚಾಂಬಿಕೆಯು ಹೇಮಾವತಿ ನದಿಯ ಸನಿಹದಲ್ಲಿ ನೆಲೆಸಿದ್ದಾಳೆ. ಕೆಂಚಾಂಬಿಕೆ ದೇವಿಯು ತನ್ನ ನಾಲಿಗೆ ಚಾಚಿ ರಕ್ಕಸರು ಮತ್ತು ಅನೇಕ ಮರಿ ರಕ್ಕಸರನ್ನು ಸಂಹರಿಸಲು ಬಿಲ್ಲನ್ನು ಬಳಸಿದ್ದಳು. ಬಳಸಿದ ಬಿಲ್ಲನ್ನು ಎಸೆದಾಗ ಅಲ್ಲಿ ಒಂದು ಕೊಳ ನಿರ್ಮಾಣವಾಯಿತು. ಅದನ್ನು ಇಂದಿಗೂ ಬಿಲ್ಗೊಳ ಎಂದು ಕರೆಯಲಾಗುತ್ತಿದೆ. ಇದು ಹರಿಹಳ್ಳಿಯಲ್ಲಿ ನೆಲೆಸಿರುವ ಕೆಂಚಾಂಬಿಕೆಯ ಮೂರನೆ ಕಲ್ಯಾಣಿ ಎನ್ನಲಾಗಿದೆ. ಪುರಾತನ ಕಾಲದಿಂದಲೂ ಗ್ರಾಮದವರೆಲ್ಲ ಸೇರಿ ಒಂದು ದಿನ ಸುಗ್ಗಿ ಕಟ್ಟೆಯಲ್ಲಿ ಸ್ಥಳೀಯ ಗ್ರಾಮೀಣ ವಾದ್ಯಕ್ಕೆ ತಕ್ಕಂತೆ ಸುಗ್ಗಿ ಕುಣಿಯುವ ಮೂಲಕ ದೇವಿಗೆ ಸಂಪನ್ನರಾಗುತ್ತಾರೆ ಎನ್ನುತ್ತಾರೆ ಸ್ಥಳೀಯ ನಿವಾಸಿ ನರಹರಿ ಭಟ್ಟರು.

# ಕ್ವಿಂಟಾಲ್ ಬಿತ್ತನೆ ಆಲೂಗಡ್ಡೆಗೆ 1200 ರೂ. ದರ ನಿಗದಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ಆಲೂಗಡ್ಡೆ ಬೆಳೆಯು ಹಾಸನ ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆಯಾಗಿದ್ದು, ವರ್ಷದಿಂದ ವರ್ಷಕ್ಕೆ ಬೆಳೆಯ ವಿಸ್ತೀರ್ಣ ಕುಸಿಯುತ್ತಿದೆ. ರೈತರು ಬೆಳೆ ಬೆಳೆಯಲು ಉತ್ತೇಜನ ನೀಡಬೇಕು ಎಂದು ಸಂಸದ ಶ್ರೇಯಸ್ ಪಟೇಲ್ ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಆಲೂಗಡ್ಡೆ ಬೆಳೆಯ ಜಿಲ್ಲಾ ಸಲಹಾ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಗುಣಮಟ್ಟದ ಬಿತ್ತನೆ ಬೀಜವನ್ನು ಕೃಷಿಕರಿಗೆ ಒದಗಿಸಲು ಕ್ರಮವಹಿಸಲು ಅಧಿಕಾರಿಗಳಿಗೆ ಸೂಚಿಸಿದರು.

2026-27 ನೇ ಸಾಲಿನ ಮುಂಗಾರು ಹಂಗಾಮಿನ ಬಿತ್ತನೆ ಆಲೂಗಡ್ಡೆಯ ಮಾರಾಟ ದರವನ್ನು 1200 ರೂ ಗಳಿಗೆ ನಿಗದಿ ಪಡಿಸಲಾಯಿತು ಮತ್ತು ಮಾರಾಟ ಪ್ರಕ್ರಿಯೆ ಮೇ.15 ರಿಂದ ಪ್ರಾರಂಭಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ರೈತರ ಹಿತ ಕಾಯುವ ದೃಷ್ಟಿಯಿಂದ ಕಡ್ಡಾಯವಾಗಿ ಬೆಳೆ ವಿಮೆ ಮಾಡಿಸುವಂತೆ ರೈತರಿಗೆ ಜಾಗೃತಿ ಮೂಡಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಶಾಸಕ ಹೆಚ್.ಪಿ. ಸ್ವರೂಪ್ ಮಾತನಾಡಿ, ಎ.ಪಿ.ಎಂ.ಸಿ.ಯಲ್ಲಿ ವರ್ತಕರು ನೋಂದಣಿ ಆಗಬೇಕು. ಜೊತೆಗೆ ಅದೇ ಪ್ರಾಂಗಣದಲ್ಲಿ ಬಿತ್ತನೆ ಬೀಜ ಮಾರಾಟ ಮಾಡಬೇಕು ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಮಾತನಾಡಿ, ಬಿತ್ತನೆ ಬೀಜದ ಬಗ್ಗೆ ಯಾವುದೇ ದೂರುಗಳು ಬಂದರೆ ಈಗಾಗಲೇ ರಚನೆಗೊಂಡಿರುವ ತಂಡ ತಕ್ಷಣ ಕ್ರಮ ವಹಿಸಬೇಕು. ಈಗಾಗಲೇ ಬಿತ್ತನೆ ಬೀಜದ ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಿದ್ದು, ರೋಗಗ್ರಸ್ತ ಬೀಜ ಎಂದು ಕಂಡುಬಂದಿರುವುದನ್ನು ಮಾರಾಟ ಮಾಡುವಂತಿಲ್ಲ ಎಂದು ತಿಳಿಸಿದರು.

ಮುನ್ನೆಚ್ಚರಿಕೆ ಕ್ರಮವಾಗಿ ಅಂಗಮಾರಿ ರೋಗವನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ರೈತರಿಗೆ ಸಮಯಕ್ಕೆ ಸರಿಯಾಗಿ ಔಷಧಿಗಳನ್ನು ಒದಗಿಸಬೇಕು ಹಾಗೂ ಬಿತ್ತನೆ ಬೀಜ ಖರೀದಿಸಿದ ವೇಳೆಯಲ್ಲಿ ಕಡ್ಡಾಯವಾಗಿ ಬಿಲ್ ಅನ್ನು ನೀಡಬೇಕು ಎಂದು ತಿಳಿಸಿದರು.

ಇದೇ ವೇಳೆಯಲ್ಲಿ ಆಲೂಗಡ್ಡೆ ಬೆಳೆಯ ಕುರಿತಾದ ಮಾಹಿತಿಯ ಪೋಸ್ಟರ್ ಅನ್ನು ಬಿಡುಗಡೆ ಮಾಡಲಾಯಿತು.

ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಯೋಗೇಶ್, ರೈತ ಸಂಘದ ಮುಖಂಡರಾದ ಮೂರ್ತಿ, ವರ್ತಕರ ಸಂಘದ ಅಧ್ಯಕ್ಷ ಗೋಪಾಲ್ ಮತ್ತಿತರರು ಸಭೆಯಲ್ಲಿ ಉಪಸ್ಥಿತರಿದ್ದರು.

# ಶುಶ್ರೂಷಕರು: ಭೂಮಿಯ ಮೇಲಿನ ದೇವದೂತರು

**- ಮೈ.ನಾ. ಲೋಕೇಶ್, ಮೈಸೂರು**



ವೈದ್ಯೋ ನಾರಾಯಣೋ ಹರಿ.. ಜೀವ ಉಳಿಸುವ ವೈದ್ಯರಲ್ಲಿ ಸಾಕ್ಷಾತ್ ಪರಮಾತ್ಮನನ್ನು ಕಾಣುವಂತೆ ವೈದ್ಯರ ಸೂಚನೆಯಂತೆ ರೋಗಿಗಳ ಚಿಕಿತ್ಸೆ, ಆರೈಕೆಯ ನಿಸ್ವಾರ್ಥ ಸೇವೆ ನೀಡುವ ದಾದಿಯರು ಸಹ, ದೇವತೆಗಳು ಎಂದರೆ ಅತಿಶಯೋಕ್ತಿಯಲ್ಲ. ಸಮಾಜಕ್ಕೆ ಶುಶ್ರೂಷಕರ ಅನನ್ಯ ಸೇವೆಯ ಗೌರವಾರ್ಥವಾಗಿ ಖ್ಯಾತ ದಾದಿ ಫ್ಲಾರೆನ್ಸ್ ನೈಟಂಗೇಲ್ ರವರ ಜನ್ಮದಿನವನ್ನು (12/5/1820) ಪ್ರತಿ ವರ್ಷ ಮೇ ತಿಂಗಳ 12ನೇ ತಾರೀಖು, ವಿಶ್ವ ಶುಶ್ರೂಷಕರ ದಿನ ಆಚರಣೆಗೆ ಬಂತು.


1965 ರಂದು ಶುಶ್ರೂಷಕರ ದಿನಾಚರಣೆಯನ್ನು ಘೋಷಿಸಲಾಯಿತು. ತನ್ನ ಇಡೀ ಬದುಕನ್ನು ಮನುಕುಲದ ಒಳಿತಿಗಾಗಿ, ಮುಡಿಪಾಗಿಟ್ಟ ಫ್ಲೋರೆನ್ಸ್ ನೈಟಂಗೇಲ್‌ರನ್ನು ಆಧುನಿಕ ನರ್ಸಿಂಗ್ ಸಂಜಾತೆ ಎಂದು ಬಣ್ಣಿಸಲಾಗಿದೆ. ಆರೋಗ್ಯ ರಕ್ಷಣಾ ವ್ಯವಸ್ಥೆಯ ಬೆನ್ನೆಲುಬಾಗಿ, ರೋಗಿಯ ದೈಹಿಕ ಮತ್ತು ಮಾನಸಿಕ ಆರೈಕೆಯಲ್ಲಿ ಶುಶ್ರೂಷಕರು ಅತಿ ಮಹತ್ವದ ಪಾತ್ರ ನಿರ್ವಹಿಸುತ್ತಾರೆ. ಇಂದಿನ ಕಾಲಮಾನದಲ್ಲಿ ಆರೋಗ್ಯ ಸೇವೆಯು ಕೇವಲ ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳಿಗೆ ಸೀಮಿತವಾಗಿ ಉಳಿದಿಲ್ಲ. ಅದು ಸಮಾಜದ ಪ್ರತಿ ಮೂಲೆ ಗೂ ವಿಸ್ತರಿಸಿದೆ. ಸಮುದಾಯ ಆರೋಗ್ಯ ಸೇವೆಗಳು ಸಮಾಜದ ಯೋಗಕ್ಷೇಮವನ್ನು ಉತ್ತೇಜಿಸುವ ರೋಗವನ್ನು ತಡೆಗಟ್ಟುವ, ಜನರ ಜೀವನಮಟ್ಟವನ್ನು ಸುಧಾರಿಸಲು, ಶ್ರಮಿಸುತ್ತಿರುವ, ಅನೇಕ ವೃತ್ತಿಪರರಲ್ಲಿ ದಾದಿಯರ ಸೇವೆ ಅನನ್ಯವಾದುದು.

2026ನೇ ವರ್ಷದ ವಿಶ್ವ ಶುಶ್ರೂಷಕರ ದಿನಾಚರಣೆಯ ಧ್ಯೇಯ ವಾಕ್ಯ ಟನಮ್ಮ ದಾದಿಯರು-ನಮ್ಮ ಭವಿಷ್ಯ, ಸಬಲೀಕೃತ ದಾದಿಯರು ಜೀವರಕ್ಷಕರುಟ ಎಂಬುದಾಗಿದೆ. ಆರೋಗ್ಯ ಫಲಿತಾಂಶಗಳನ್ನು ಸುಧಾರಿಸುವಲ್ಲಿ, ವೈದ್ಯರ ಸೂಚನೆಯಂತೆ ಚಿಕಿತ್ಸೆ ನೀಡುವುದು ರೋಗಿಗಳ ನಿರಂತರ ಮೇಲ್ವಿಚಾರಣೆ ಮತ್ತು ತುರ್ತು ಸಂದರ್ಭದಲ್ಲಿ ಸಮಯೋಚಿತ ಸೇವೆ ಒದಗಿಸುವ ದಾದಿಯರು ರೋಗಿಗಳ ಪಾಲಿನ ಮಾತೃ ಸ್ವರೂಪರು ಎಂದರೆ ಅತಿಶಯೋಕ್ತಿಯಲ್ಲ. ರೋಗಿಗಳಿಗೆ ರೋಗ ತಡೆಗಟ್ಟುವಿಕೆ ಮತ್ತು ಸ್ವ ಆರೈಕೆಯ ಬಗ್ಗೆ ಶಿಕ್ಷಣ ನೀಡುವ ಮೂಲಕ, ರೋಗಿಗಳು ಆರೋಗ್ಯಕರ ನಡವಳಿಕೆಗಳನ್ನು ಅಳವಡಿಸಿಕೊಳ್ಳಲು ಹಾಗೂ ಧೀರ್ಘಕಾಲದ ಪರಿಸ್ಥಿತಿಯನ್ನು ನಿರ್ವಹಣೆ ಮಾಡುವಲ್ಲಿ ರೋಗಿಗಳಿಗೆ ಆಸರೆಯಾಗುತ್ತಾರೆ.

ರೋಗಿಗಳ ಮತ್ತು ವೈದ್ಯರ ನಡುವಿನ ಸೇತುವೆಯಾಗಿ ಚಿಕಿತ್ಸೆ ಮಾತ್ರವಲ್ಲದೆ, ರೋಗಿಗಳಿಗೆ ಆತ್ಮ ವಿಶ್ವಾಸ ತುಂಬುವ ಮಹೋನ್ನತ ಕಾರ್ಯದಲ್ಲಿ ರೋಗಿಯ ದುಗುಡವನ್ನು ಕಡಿಮೆ ಮಾಡುವಲ್ಲಿ ದಾದಿಯರ ಸಾಂತ್ವನ ನಗುಮೊಗದ ಸೇವೆ ಬಹುಮುಖ್ಯ ಪಾತ್ರ ವಹಿಸುತ್ತದೆ.

ಸಹಾನುಭೂತಿ ಮತ್ತು ಸಮರ್ಪಣಾ ಭಾವದ ಸಂಗಮವಾಗಿರುವ ನರ್ಸಿಂಗ್ ಸೇನಾ ವೃತ್ತಿ, ಕೋವಿಡ್ ಸಂದರ್ಭದಲ್ಲಿ ವಹಿಸಿದ ಪಾತ್ರ ಅಸಾಧಾರಣವಾದುದ್ದು. ತಮ್ಮ ಜೀವ ಪಣಕ್ಕಿಟ್ಟು ನೀಡಿದ ಸೇವೆಗೆ ಅರ್ಹವಾಗಿಯೇ ಅವರನ್ನು ಕೋವಿಡ್ ವಾರಿಯರ್ಸ್ ಎಂದು ಗೌರವಿಸಲಾಯಿತು. ಜೀವನ ಶೈಲಿ ಮತ್ತಿತರ ಕಾರಣಗಳಿಂದ ಆಧುನಿಕ ಮಾನವನ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಮೇಲೆ ಒತ್ತಡ ಹೆಚ್ಚಾಗಿರುವಂತೆ, ರೋಗಿಗಳ ಆರೈಕೆಗೆ ಕಟಿಬದ್ಧವಾಗಿ ದುಡಿಯುವ ಶುಶ್ರೂಷಕರ ಮೇಲೆ ಸಹ ಒತ್ತಡ ಹೆಚ್ಚಾಗಿದೆ. ವಿಶ್ವ ಆರೋಗ್ಯ ಸಂಸ್ಥೆಯ ಮಾನದಂಡದ ಪ್ರಕಾರ 2026ರ ವೇಳೆಗೆ 4.3 ಮಿಲಿಯನ್‌ಗೂ ಹೆಚ್ಚು ದಾದಿಯರ ಅವಶ್ಯಕತೆ ಇದೆ ಎಂದು ಅಂದಾಜಿಸಲಾಗಿದೆ. ಇತ್ತೀಚೆಗೆ ಸರ್ಕಾರ ನರ್ಸ್ ಪದಕ್ಕೆ ಟಶುಶ್ರೂಷಾ ಅಧಿಕಾರಿಟ ಎಂಬ ಪದನಾಮವನ್ನು ಮಾನ್ಯ ಮಾಡಿದ್ದು, ಮನುಕುಲದ ಒಳಿತಿಗಾಗಿ ಸದಾ ಮಿಡಿಯುವ, ದುಡಿಯುವ ಶುಶ್ರೂಷಕರ ನಿಸ್ವಾರ್ಥ ಸೇವೆಗೆ ನಮ್ಮ ನಮನಗಳು.

## ಪತ್ರಕರ್ತ ಕೆ.ಆರ್.ಮಂಜುನಾಥ್‌ಗೆ ಪ್ರಶಸ್ತಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯ ಪತ್ರಕರ್ತ ಕೆ.ಆರ್.ಮಂಜುನಾಥ್ ಅವರಿಗೆ ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘದ ಪ್ರತಿಷ್ಠಿತ ಕೆ.ಕೆ.ಶೆಟ್ಟಿ ಕುತ್ತಿಕಾರ್ ದತ್ತಿನಿಧಿ ಪ್ರಶಸ್ತಿ ಲಭಿಸಿದೆ. ಸುದೀರ್ಘ ಪತ್ರಿಕಾ ಸೇವೆ, ಕನ್ನಡ ಭಾಷೆ ಹಾಗೂ ಪತ್ರಿಕೋದ್ಯಮ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಗುರುತಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಮಂಜುನಾಥ್ ಅವರು ಉದಯ ಟಿವಿ ಜಿಲ್ಲಾ ವರದಿಗಾರರಾಗಿ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ಹಾಗೂ ಕರ್ನಾಟಕ ಮಾಧ್ಯಮ ಅಕಾಡೆಮಿ ಸದಸ್ಯರಾಗಿ ಸಹ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಮಲೆನಾಡು ಮಂದಾರ ಪತ್ರಿಕೆ ಸಂಪಾದಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮೇ 16 ರಂದು ಕಾಸರಗೋಡಿನಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ.

## ಇತಿಹಾಸದಲ್ಲಿ ಈ ದಿನ

### ಮೇ-13

1952: ಭಾರತದ ಮೊದಲ ಸಂಸತ್ ಅಧಿವೇಶನ ಆರಂಭವಾಯಿತು.

1967: ಡಾ. ಜಾಕಿರ್ ಹುಸೇನ್ ಅವರು ಭಾರತದ ಮೊದಲ ಮುಸ್ಲಿಂ ರಾಷ್ಟ್ರಪತಿಯಾಗಿ ಅಧಿಕಾರ ಸ್ವೀಕರಿಸಿದರು.

1998: ಭಾರತ ರಾಜಸ್ಥಾನದ ಪೋಖ್ರಾಣಿನಲ್ಲಿ ಎರಡನೇ ಹಂತದ ಅಣು ಪರೀಕ್ಷೆಗಳನ್ನು ಯಶಸ್ವಿಯಾಗಿ ನಡೆಸಿತು.

2000: ಭಾರತದ ಖ್ಯಾತ ನಟ, ನಿರ್ದೇಶಕ ರಾಜ್ ಕುಮಾರ್ ಅವರಿಗೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಘೋಷಿಸಲಾಯಿತು.

2011: ವಿಶ್ವಕಪ್ ವಿಜೇತ ಭಾರತೀಯ ಕ್ರಿಕೆಟ್ ತಂಡಕ್ಕೆ ದೇಶಾದ್ಯಂತ ಭವ್ಯ ಸನ್ಮಾನಗಳು ನಡೆದವು.

**ಜನನ**

1956: ಮನಮೋಹನ್ ಸಿಂಗ್, ಭಾರತದ ಪ್ರಧಾನಿ


1969: ಸ್ಟೀವಿ ವಂಡರ್

# ಸಾಗುತಾ ಇದೆ ದೋಣಿ ನದಿಯ ನೀರನು ಸೀಳುತಾ

**-ಮಾಳೇಟಿರ ಸೀತಮ್ಮ ವಿವೇಕ್**

ಕರುನಾಡಿನಲ್ಲಿ ಅದೆಷ್ಟೋ ಸಾಹಿತಿಗಳು ಪ್ರತ್ಯಕ್ಷವಾಗಿ ಪರೋಕ್ಷವಾಗಿ ನವ್ಯ ಕನ್ನಡದಲ್ಲಿಯೂ ಉತ್ತುಂಗಕ್ಕೇರಿಸುವ ಸಾಹಿತ್ಯವನ್ನು ನೀಡಿ ಕನ್ನಡ ನುಡಿಯನ್ನು ವಿಶ್ವಮಟ್ಟದಲ್ಲಿ ನಿಲ್ಲುವಂತೆ ಮಾಡಿದ್ದಾರೆ. ಅದೇ ನಿಟ್ಟಿನಲ್ಲಿ ಸ್ವತಂತ್ರ ಅಮೃತ ಮಹೋತ್ಸವವನ್ನು ನೆನಪಿಸಿಕೊಳ್ಳುವಂತೆ ಟಸಾಗುತ ಇದೆ ದೋಣಿ ನದಿಯ ನೀರನು ಸೀಳುತಾಟ ಎನ್ನುವಂತಹ ಗಮನ ಸೆಳೆಯುವ ಶೀರ್ಷಿಕೆ ಹೊತ್ತ ಹಾಸನದ ಖ್ಯಾತ ಸಾಹಿತಿಯೊಬ್ಬರ ವಿಮರ್ಶನ ಕೃತಿಯೊಂದು ಇದೀಗ ಬೆಳಕಿಗೆ ಬಂದಿದೆ. ಆ ಸಾಹಿತಿಯೇ ಗೊರೂರು ಅನಂತರಾಜು. ಇವರ ಕೈಚಳಕದಿಂದ ಹೊರಬಂದ ನಾನಾ ಪುಸ್ತಕ, ಲೇಖನ ಸಂಕಲನಗಳಿಗೆ ಹೊಸ ಸೇರ್ಪಡೆ. ಹಾಸನದ ಹೆಸರಾಂತ ಸಾಹಿತಿಗಳನೇಕರು ಬರೆದ ಸುಂದರವಾದ ವಿಮರ್ಶನ ಲೇಖನಗಳನ್ನು ಜೋಡಿಸಿರುವಂತಹ ಹೊತ್ತಿಗೆ ಟಸಾಗುತಾ ಇದೆ ದೋಣಿ ನದಿಯ ನೀರನು ಸೀಳುತಾಟ

ಇದೊಂದು ಸಮೃದ್ಧ ಕನ್ನಡ ಸಾಹಿತ್ಯದ ಪ್ರಾತಿನಿಧಿಕ ಬಿಡಿ ಕೃತಿಗಳೆಂದೇ ಹೇಳಬೇಕು. ಯಾವುದೇ ಪುಸ್ತಕವಿರಲಿ ಅಲ್ಲಿರಬೇಕಿರುವುದು ಜ್ಞಾನಾರ್ಜನೆಯ ಭಂಡಾರ, ಸಮಚಿತ್ತ ಕಾಯುವ ಬರಹಗಳು. ಆ ರೀತಿಯಲ್ಲಿಯೇ ಬರೆಯುವಂತಹ ಒಬ್ಬ ಸಾಹಿತಿಯ ಪ್ರಹಸನ, ಲೇಖನ, ನಾನಾ ಕೃತಿಗಳಿತ್ಯಾದಿಗಳಿಗೆ ಇತರೆ ಸಾಹಿತಿಗಳು ಬಿಡಿಯಾಗಿ ಬರೆದ ಅಭಿಪ್ರಾಯ ಕ್ರೋಢಿಕರಿಸಿ ಪ್ರಕಟಪಡಿಸಲಾಗಿರವಂತಹದೇ ಈ ಪುಸ್ತಕದ ವಿಶೇಷತೆ.




ಹಾಸನ ಜಿಲ್ಲೆಯ ಗೊರೂರು ಸ್ವಾತಂತ್ರ್ಯ ಹೋರಾಟಗಾರರು ಮತ್ತು ಸಾಹಿತಿಗಳ ತವರೂರು ಎಂದೇ ಸುಪ್ರಸಿದ್ಧ. ಅಂತಹ ಊರಿಗೆ ಈ ಶತಮಾನದ ಕಿರೀಟ ಗೊರೂರು ಅನಂತರಾಜು ಅವರು ಎಂದರೆ ತಪ್ಪಾಗದು. ಅವರ ಬಗ್ಗೆ ಅನೇಕ ಹಿರಿಯ ಸಾಹಿತಿಗಳು ಹೇಳುವ ಒಂದು ಸಾಮಾನ್ಯ ಮಾತು ಸರಳ ಸಜ್ಜನಿಕೆಯ ಪಾದರಸದಂತಹ ವ್ಯಕ್ತಿ. ಕನ್ನಡವನ್ನು ನಿತ್ಯ ಲೇಖನಿಯ ಮೂಲಕ ಸುಲಲಿತವಾಗಿ ಹರಿಯಬಿಡುವ ಸಾಹಿತಿ. ಅಂತಹ ಸಾಹಿತಿಗಳ ಕೃತಿಗೆ ನುಡಿಪೋಣಿಸುವುದು ಸಣ್ಣ ವಿಚಾರವಲ್ಲ. ಅಂತಹದೊಂದು ಅವಕಾಶ ಸಿಕ್ಕಿರುವುದು ನನ್ನ ಸೌಭಾಗ್ಯವೆಂದುಕೊಂಡಿದ್ದೇನೆ.

ಅವರ ಈ ಕೃತಿಯಲ್ಲಿ ಅನೇಕ ಸಾಹಿತಿಗಳು ತಮ್ಮ ಸಾಹಿತ್ಯಿಕ ಚಾತುರ್ಯತೆಯನ್ನು ಹೊರಗೆಡವಿದ್ದಾರೆ ಎಂದರೂ ತಪ್ಪಾಗಲಾರದು. ಅಂತೆಯೇ ಎನ್. ಎಲ್.ಚನ್ನೇಗೌಡರು ಗೆಳೆಯರೆಂದೆಣಿಸದೆ ಮಾಡಿದ ವಿಮರ್ಶೆ ಹಾಗೂ ಓಂ. ಸಾವಿತ್ರಮ್ಮ. ಅವರು ಹಾಸನದ ಸಾಂಸ್ಕೃತಿಕ ದಿಗ್ಗಜರ ಕುರಿತು ಮತ್ತು ಗೊರೂರು ಅನಂತರಾಜುರವರ ಹಲವು ಕೃತಿಗಳ ಕುರಿತು ಸುಂದರವಾಗಿ ಲೇಖನಿ ಹರಿಸಿದ್ದಾರೆ. ಮಾಲಾ ಚೆಲುವನಹಳ್ಳಿಯವರು ಶ್ರೀಯುತರಿಗೆ ಸಂದ ಪ್ರಶಸ್ತಿ ಪುರಸ್ಕಾರಗಳನ್ನೂ ಅವರ ಪ್ರತಿಭೆಯನ್ನೂ ಅನಾವರಣಗೊಳಿಸಿರುವುದು. ಹೊನ್ನಶೆಟ್ಟಿಹಳ್ಳಿ ಗಿರಿರಾಜ್ ಅವರು ನಾಟಕ ಬರವಣಿಗೆಯಲ್ಲಿ ಗೊರೂರರ ಕೈಚಳಕ ಕುರಿತು ಬರೆದ ಲೇಖನ, ವಾಣಿ ಮಹೇಶ್ ಅವರು ಬದುಕು ಸಂತೆ ಬಂಡಿ ಶೀರ್ಷಿಕೆಯಡಿ ಬರೆದ ಅನಂತರಾಜುರವರು ಗೊರೂರು ಅಣೆಕಟ್ಟೆ ಕಟ್ಟುವುದನ್ನು ನೋಡುತ್ತಾ ಬೆಳೆದವರು ಎನ್ನುವ ವಿಚಾರವನ್ನೆತ್ತಿ ವಿಮರ್ಶೆ ಮಾಡಿರುವಂತಹದೆಲ್ಲಾ ಗಮನ ಸೆಳೆಯುತ್ತದೆ.

ಜಿ.ಎಸ್.ಪ್ರಕಾಶ್ ಬೆಂಗಳೂರುರವರು ರಂಗಭೂಮಿ ಹಾಗೂ ಜಾನಪದ ಕಲಾವಿದರ ಸಂದರ್ಶನ ಮಾಡಿದಂತಹ ರಂಗವೈಭವವನ್ನು ಹೆಸರಿಗೆ ತಕ್ಕಂತೆ ಅರ್ಥಗರ್ಭಿತವಾಗಿ ವಿಮರ್ಶಿಸಿದ್ದಾರೆ. ಗಣಪತಿ ಗೋ ಚಲವಾದಿರವರು ಚೈನಾ ನಾಟಕ ಕುರಿತು ಬರೆದ ಕೃತಿಗೆ ಸೂಕ್ತ ರೀತಿಯಲ್ಲಿ ವಿಷಯ ಎತ್ತಿಹಿಡಿಯುವಂತ ವಿಚಾರ ಜೋಡಿಸಿ ವಿಮರ್ಶೆ ಬರೆದಿದ್ದಾರೆ. ಮಂಡ್ಯದ ಕಟ್ಟೇ ಎಂ.ಎಸ್.ಕೃಷ್ಣಸ್ವಾಮಿರವರು ಕಥಾಸಿರಿ ಐಸಿರಿ ಕುರಿತು ಬರೆಯುವಾಗ ಕೈಯಾಡಿಸಿದ ಕ್ಷೇತ್ರಗಳನ್ನೆಲ್ಲ ಪ್ರಕಟಪಡಿಸಿದ್ದಾರೆ. ಎಸ್. ಲಲಿತಾರವರು ಗೊರೂರು ಅನಂತರಾಜುರವರು ಪ್ರತಿಯೊಬ್ಬರ ಬರವಣಿಗೆಗೆ ನೀಡಿದ ಮಾನ್ಯತೆ, ಸೇವಾಪರತೆ ಕುರಿತು ತಮ್ಮ ಭಾವನೆಗಳನ್ನೂ ವ್ಯಕ್ತಪಡಿಸುತ್ತ ವಿಮರ್ಶನ ತೋರಣ ಕಟ್ಟಿದ್ದಾರೆ. ಎಸ್.ಎಸ್.ಪುಟ್ಟೇಗೌಡರು ಹೊಯ್ಸಳ ಇತಿಹಾಸ ಕುರಿತು ಬರೆದ ಲೇಖನ ಹೇಮೆಯೊಂದಿಗಿನ ಗೊರೂರು ಅನಂತರಾಜುರವರಿಗಿರುವ ಆತ್ಮೀಯ ನಂಟನ್ನು ತಾವೂ ಭಾವನಾತ್ಮಕವಾಗಿ ಬರೆದಿದ್ದಾರೆ. ಸ್ವತ: ಗೊರೂರು ಅನಂತರಾಜುರವರು ಇತರರ ಕೃತಿಗಳಿಗೆ ಬರೆದ ವಿಮರ್ಶೆ ಆಸಕ್ತಿದಾಯಕವಾಗಿದೆ. ಒಟ್ಟಿನಲ್ಲಿ ಈ ಹೊತ್ತಿಗೆಯು ಒಬ್ಬ ಸಕಲಕಲಾವಲ್ಲಭ ಸಾಹಿತಿ ನಾಗರೀಕ ಸಮಾಜವೆಂಬ ನದಿಯಲ್ಲಿ, ಬಿಳಿ ಹಾಳೆ ಎಂಬ ನೀರನ್ನು ದೋಣಿ ಎಂಬ ಲೇಖನಿಯ ಮೂಲಕ ಅಕ್ಷರಗಳಿಂದ ಸೀಳುತ ಸಾಗುತ್ತಲೇ ಹೋಗುತ್ತಿದ್ದಾರೆ ಎಂಬುದನ್ನು ವ್ಯಕ್ತಪಡಿಸಿದಂತಿದೆ. ಕೊನೆಯಲ್ಲಿ ಇವರ ಸಾಹಿತ್ಯ ಕಲಾ ಸಾಧನೆಗೆ ಇನ್ನಷ್ಟು ಭೋರ್ಗರೆದು ಹರಿಯುತ್ತಲೇ ಇರಲಿ ಎಂಬ ಶುಭ ಕಾಮನೆಯೊಂದಿಗೆ ಆಶಯ ನುಡಿಗಳನ್ನು ಆತ್ಮಪೂರ್ವಕ ಅಕ್ಷರಗಳಲ್ಲಿ ದಾಖಲಿಸಿದ್ದೇನೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248